2) ಸಾಹಿತ್ಯ, ಸಂಗೀತ, ನೃತ್ಯ, ನಾಟಕ, ಜಾನಪದ, ಯಕ್ಷಗಾನ, ಲಲಿತಕಲೆ, ಶಿಲ್ಪಕಲೆಗಳಲ್ಲಿ ಗಣನೀಯ ಸೇವೆ ಸಲ್ಲಿಸಿದ ಸಾಹಿತಿ/ಕಲಾವಿದರಿಗೆ ಕಲಾವಿದರ ಗುರುತಿನ ಚೀಟಿ ಸೌಲಭ್ಯ ಮತ್ತು ವೈದ್ಯಕೀಯ ಗುರುತಿನ ಚೀಟಿ ಸೌಲಭ್ಯ ಮತ್ತು ವೈದ್ಯಕೀಯ ಗುರುತಿನ ಚೀಟಿ ನೀಡುವ ಮೂಲಕ ವೈದ್ಯಕೀಯ ನೆರವು ನೀಡಲಾಗುತ್ತಿದೆ.

3) ಅಸಂಘಟಿತ ಕಲಾವಿದರಿಗೆ ವಾದ್ಯ ಪರಿಕರ ಮತ್ತು ವೇಷಭೂಷಣ ಖರೀದಿಗೆ ಧನಸಹಾಯ ನೀಡಲಾಗುತ್ತಿದೆ.

ಶೌಚಾಲಯಗಳ ನಿರ್ಮಾಣ

1413(1684); ಶ್ರೀ ಮೇಟಿ ಹುಲ್ಲಪ್ಪ ಯಮನಪ್ಪ (ಬಾಗಲಕೋಟೆ)

ಅ) ರಾಜ್ಯದಲ್ಲಿ ಪ್ರಸಕ್ತ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ಎಷ್ಟು ಶೌಚಾಲಯಗಳ ನಿರ್ಮಾಣ ಮಾಡಲಾಗಿರುತ್ತದೆ. (ಜಿಲ್ಲಾವಾರು ಮಾಹಿತಿ ನೀಡುವುದು);

ಆ) ಶೌಚಾಲಯ ನಿರ್ಮಾಣಕ್ಕೆ ನೀಡಲಾಗುತ್ತಿರುವ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಅನುದಾನವೆಷ್ಟು; ಒಂದು ಶೌಚಾಲಯ ನಿರ್ಮಾಣಕ್ಕೆ ಖರ್ಚಾಗುವ ಮೊತ್ತವೆಷ್ಟು;

ಇ) ಈಗ ನೀಡಲಾಗುತ್ತಿರುವ ಅನುದಾನವು ಶೌಚಾಲಯ ಕಟ್ಟಿಸಲು ಸಾಕಾಗುತ್ತದೆಯೇ;

ಈ) ಗ್ರಾಮೀಣ ಭಾಗಗಳಲ್ಲಿ ನೀರಿನ ಸಮಸ್ಯೆ ಹೆಚ್ಚಾಗಿರುವುದರಿಂದ ಈ ಶೌಚಾಲಯಗಳಿಗೆ ನೀರಿನ ವ್ಯವಸ್ಥೆಯನ್ನು ಹೇಗೆ ಕಲ್ಪಿಸಲಾಗುವುದು;

ಉ) ಈಗಾಗಲೇ ಶೌಚಾಲಯ ಕಟ್ಟಿಸಿದಂತಹ ಗ್ರಾಮೀಣ ಭಾಗದ ಜನರಿಗೆ ಅನುದಾನವನ್ನು ಪಡೆಯಲು ಅರ್ಹರಿರುತ್ತಾರೆಯೇ; ಹಾಗಿದ್ದಲ್ಲಿ, ಈ ಬಗ್ಗೆ ಎಲ್ಲಿ ಅರ್ಜಿ ಸಲ್ಲಿಸಬೇಕು (ವಿವರ ನೀಡುವುದು)?

ಶ್ರೀ ಹೆಚ್.ಕೆ. ಪಾಟೀಲ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು)

ಅ) ರಾಜ್ಯದಲ್ಲಿ ಪ್ರಸಕ್ತ ಸರ್ಕಾರವು ಅಸ್ತಿತ್ವಕ್ಕೆ ಬಂದ ಮೇಲೆ 2013–14ನೇ ಸಾಲಿನಲ್ಲಿ 505517 ವೈಯುಕ್ತಿಕ ಗೃಹ ಶೌಚಾಲಯಗಳನ್ನು ಹಾಗೂ 2014–15ನೇ ಸಾಲಿನಲ್ಲಿ ಡಿಸೆಂಬರ್–2014ರ ಅಂತ್ಯಕ್ಕೆ ಒಟ್ಟು 508187 ವೈಯುಕ್ತಿಕ ಗೃಹ ಶೌಚಾಲಯಗಳು. ಒಟ್ಟಾರೆ 1013704 ವೈಯುಕ್ತಿಕ ಗೃಹ ಶೌಚಾಲಗಳನ್ನು ನಿರ್ಮಾಣ ಮಾಡಲಾಗಿರುತ್ತದೆ.

(ಜಿಲ್ಲಾವಾರು ವಿವರವನ್ನು ಅನುಬಂಧ –1ರಲ್ಲಿ ನೀಡಲಾಗಿದೆ.)

ಆ) ಕೇಂದ್ರ ಹಾಗೂ ರಾಜ್ಯ ಸರ್ಕಾರದಿಂದ ಬೇಸ್‌ಲೈನ್ ಸಮೀಕ್ಷೆಯಲ್ಲಿನ ಶೌಚಾಲಯ ರಹಿತ ಕುಟುಂಬಗಳು ಶೌಚಾಲಯಗಳನ್ನು ನಿರ್ಮಿಸಿಕೊಂಡು ಬಳಸುವುದಕ್ಕೆ ಇತರೆ ಜನಾಂಗದ ಫಲಾನುಭವಿಗಳಿಗೆ ಅನುಕ್ರಮವಾಗಿ ರೂ.9000/– ಮತ್ತು ರೂ.3000/–ಗಳನ್ನು, ಅನುಸೂಚಿತ ಜಾತಿ ಮತ್ತು ಅನುಸೂಚಿತ ಪಂಗಡ ಫಲಾನುಭವಿಗಳಿಗೆ ಅನುಕ್ರಮವಾಗಿ ರೂ.9000/– ಮತ್ತು ರೂ.6000/–ಗಳನ್ನು ಪ್ರೋತ್ಸಾಹಧನವಾಗಿ ನೀಡಲಾಗುತ್ತಿದೆ.

ಶೌಚಾಲಯದ ವಿನ್ಯಾಸ ಹಾಗೂ ಅದಕ್ಕೆ ಬಳಸುವ ಸಾಮಾಗ್ರಿಗಳ ಗುಣಮಟ್ಟ ಆಧಾರಿಸಿ ನಿರ್ಮಾಣದ ವೆಚ್ಚವನ್ನು ಅಂದಾಜಿಸಬೇಕಾಗಿರುತ್ತದೆ.

ಇ) ಬೇಸ್‌ಲೈನ್ ಸಮೀಕ್ಷೆಯಲ್ಲಿನ ಶೌಚಾಲಯ ರಹಿತ ಕುಟುಂಬಗಳು ಶೌಚಾಲಯ ನಿರ್ಮಿಸಿಕೊಂಡು ಬಳಸುವುದಕ್ಕೆ ಇತರೆ ಜನಾಂಗದ ಕುಟುಂಬಗಳಿಗೆ ರೂ.12000/–ಗಳನ್ನು ಮತ್ತು ಅನುಸೂಚಿತ ಜಾತಿ ಮತ್ತು ಅನುಸೂಚಿತ ಪಂಗಡ ಕುಟುಂಬಗಳಿಗೆ ರೂ.15000/–ಗಳ ಪ್ರೋತ್ಸಾಹಧನ ನೀಡಲಾಗುತ್ತಿದೆ.

ಸರ್ಕಾರದಿಂದ ಶೌಚಾಲಯ ನಿರ್ಮಾಣಕ್ಕೆ ಅನುದಾನವನ್ನು ನೀಡುತ್ತಿಲ್ಲ.

ಈ) ಶೌಚಾಲಯಗಳನ್ನು ಬಳಸುತ್ತಿರುವ ಫಲಾನುಭವಿಗಳು ಕೇಂದ್ರ ಹಾಗೂ ರಾಜ್ಯ ಸರ್ಕಾರದ ಕುಡಿಯುವ ನೀರಿನ ಯೋಜನೆಗಳಿಂದ ನೀರನ್ನು ಶೌಚಾಲಯಗಳ ನಿರ್ವಹಣೆಗೆ ಬಳಸಿಕೊಳ್ಳಬೇಕಾಗಿರುತ್ತದೆ.

ಉ) 2012–13ನೇ ಸಾಲಿನ ಬೇಸ್‌ಲೈನ್ ಸಮೀಕ್ಷೆಯಲ್ಲಿನ ಶೌಚಾಲಯ ರಹಿತ ಕುಟುಂಬಗಳು ಶೌಚಾಲಯವನ್ನು ನಿರ್ಮಿಸಿಕೊಂಡು ಬಳಸುವುದಕ್ಕೆ ಪ್ರೋತ್ಸಾಹಧನ ನೀಡಲಾಗುತ್ತಿದೆ.

ಬೇಸ್‌ಲೈನ್ ಸಮೀಕ್ಷೆಯಲ್ಲಿನ ಶೌಚಾಲಯ ರಹಿತ ಕುಟುಂಬಗಳು ಶೌಚಾಲಯ ನಿರ್ಮಿಸಿಕೊಂಡು ಬಳಸುವುದಕ್ಕೆ ಪ್ರೋತ್ಸಾಹಧನ ಪಡೆಯಲು ಸಂಬಂಧಿಸಿದ ಗ್ರಾಮ ಪಂಚಾಯಿತಿಗಳಿಗೆ ಅರ್ಜಿ ಸಲ್ಲಿಸಬೇಕು.

ಅನುಬಂಧ–1

2013–14 ಮತ್ತು 2014–15ನೇ ಸಾಲಿನಲ್ಲಿ ಜಿಲ್ಲೆಗಳು ಸಾಧಿಸಿರುವ ಭೌತಿಕ ಶೌಚಾಲಯ ಪ್ರಗತಿ ವಿವರ

ಕ್ರ ಸ	ಜಿಲ್ಲೆಯ ಹೆಸರು	2013–14 ಪ್ರಗತಿ ಮಾರ್ಚ್–2014ರ ಅಂತ್ಯಕ್ಕೆ	2014–15 ಪ್ರಗತಿ ಡಿಸೆಂಬರ್–2014ರ ಅಂತ್ಯಕ್ಕೆ
1	2	3	ಘಿ
1	ಬಾಗಲಕೋಟೆ	10075	15411
2	ಬೆಂಗಳೂರು ಗ್ರಾಮಾಂತರ	10544	14229
3	ಬೆಂಗಳೂರು ನಗರ	9003	7536
4	ಬೆಳಗಾವಿ	38606	35803
5	ಬಳ್ಳಾರಿ	13998	11199
6	ಬೀದರ್	9289	9061
7	ವಿಜಯಪುರ	16109	14531
8	ಚಾಮರಾಜನಗರ	14403	12566
9	ಚಿಕ್ಕಮಗಳೂರು	13637	13454
10	ಚಿಕ್ಕಬಳ್ಳಾಪುರ	17311	21078
11	ಚಿತ್ರದುರ್ಗಾ	14119	19956
12	ದಾವಣಗೆರೆ	24572	11336
13	ಧಾರವಾಡ	19884	10786
14	ಗದಗ	14246	10497
15	ಗುಲಬರ್ಗಾ	14731	17623
16	ಹಾಸನ	17187	26610
17	ಹಾವೇರಿ	13108	16693
18	ಕೊಡಗು	6895	5698
19	ಕೋಲಾರ	15992	19096
20	ಕೊಪ್ಪಳ	54051	29980
21	ಮಂಡ್ಯ	17033	44504
22	ಮಂಗಳೂರು	4477	1471
23	ಮೈಸೂರು	29046	23523
24	ರಾಯಚೂರು	13519	16980
25	ರಾಮನಗರ	18247	30084
26	ಶಿವಮೊಗ್ಗ	12473	15507
27	ತುಮಕೂರು	34780	25171
28	ಉಡುಪಿ	10669	8684
29	ಉತ್ತರ ಕನ್ನಡ	9282	14192
30	ಯಾದಗಿರಿ	8231	4928
ಒಟ್ಟು		505517	508187